# ಎನ್ಐಟಿಕೆ: ನೀರು ಶುದ್ಧೀಕರಣ ಘಟಕಕ್ಕೆ ಚಾಲನೆ



**ಸುರತ್ಕಲ್, ಫೆ. 26:** ಪ್ರತಿದಿನ ಒಂದು ಮಿಲಿಯನ್ ಲೀಟರ್ ಸಾಮರ್ಥ್ಯ ಹೊಂದಿರುವ ಅತ್ಯಾಧುನಿಕ ನೀರು ಶುದ್ಧೀಕರಣ ಘಟಕವನ್ನು ಸುರತ್ಕಲ್‌ನ ರಾಷ್ಟ್ರೀಯ ತಾಂತ್ರಿಕ ಸಂಸ್ಥೆ ಕರ್ನಾಟಕ (ಎನ್ಐಟಿಕೆ) ಉದ್ಘಾಟಿಸಲಾಯಿತು.

ಪೆಟ್ರೋನೆಟ್ ಎಂ.ಎಚ್.ಬಿ.ಲಿ.ನ ವ್ಯವಸ್ಥಾಪಕ ನಿರ್ದೇಶಕ ಹಾಗೂ 1989ರ ಮೆಕ್ಯಾನಿಕಲ್ ಎಂಜಿನಿಯರಿಂಗ್ ಬ್ಯಾಚ್ ಎನ್ಐಟಿಕೆ ಹಳೆ ವಿದ್ಯಾರ್ಥಿ ಸುಧೀರ್ ಕುಮಾರ್ ಮತ್ತು ಎನ್ ಐಟಿಕೆ ಸುರತ್ಕಲ್ ನಿರ್ದೇಶಕ ಪ್ರೊ। ಬಿ. ರವಿ ಅವರು ಉದ್ಘಾಟಿಸಿದರು.

ಕ್ಯಾಂಪಸ್‌ನ ಟ್ಯೂಬ್‌ವೆಲ್‌ಗಳು ಮತ್ತು ಓಪನ್‌ವೆಲ್‌ಗಳಿಂದ ಪಂಪ್ ಮಾಡಲಾದ ಕಚ್ಚಾ ನೀರನ್ನು ಶುದ್ಧೀಕರಿಸಲು ವಿನ್ಯಾಸಗೊಳಿಸಲಾಗಿದೆ. ಇದರಿಂದ ಮಂಗಳೂರು ಮಹಾನಗರ ಪಾಲಿಕೆಯಿಂದ ದೊರೆಯುವ ನೀರಿನ ಪೂರೈಕೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ನೀರು ಎರಡು ಹಂತದ ಶೋಧನೆಗೊಳಗಾಗುತ್ತದೆ. ಅನಂತರ ಕ್ಲೋರಿನೇಶನ್ ಮತ್ತು ಓಜೋನೇಷನ್ ಪ್ರಕ್ರಿಯೆ ನಡೆಯುತ್ತದೆ. ಇದರಿಂದ ಹೆಚ್ಚುವರಿ ಕಬ್ಬಿಣ ಹಾಗೂ ನೀರಿನಿಂದ ಹರಡುವ ಅಶುದ್ಧಿಗಳನ್ನು ತೆಗೆದುಹಾಕಲಾಗುತ್ತದೆ. ಈ ಯೋಜನೆಯನ್ನು ಪೆಟ್ರೋನೆಟ್ ಎಂಎಚ್‌ಬಿ (ಒಎನ್‌ಜಿಸಿ ಮತ್ತು ಎಚ್‌ಪಿಸಿಎಲ್ ಉಪಕಂಪೆನಿ) ತನ್ನ 2025-26 ಸಿಎಸ್‌ಆರ್ ಯೋಜನೆಯಡಿ ಹೂಡಿಕೆ ಮಾಡಿದೆ.

ಪೆಟ್ರೋನೆಟ್‌ನ ತಾಂತ್ರಿಕ ಮುಖ್ಯಸ್ಥೆ ಸ್ವೆಸುಧಮ್ಮೀ, ಕಾರ್ಯಾಚರಣೆ ಮುಖ್ಯಸ್ಥ ಉದಯ ಪೈ ಹಾಗೂ ಇತರ ಅಧಿಕಾರಿಗಳು, ಎನ್ಐಟಿಕೆ ರಿಜಿಸ್ಟ್ರಾರ್ ಪ್ರೊ। ಕುಮಾರ್ ಜೆ.ಎನ್., ಯೋಜನೆ ಮತ್ತು ಅಭಿವೃದ್ಧಿ ಡೀನ್ ಪ್ರೊ। ವೆಂಕಟೇಶ ಪೆರುಮಾಳ್, ಹಳೆ ವಿದ್ಯಾರ್ಥಿ ಮತ್ತು ಕಾರ್ಪೋರೇಟ್ ಸಂಬಂಧಗಳ ಡೀನ್ ಪ್ರೊ। ಪ್ರಸನ್ನ ಬೇಳೂರು ಹಾಗೂ ಇತರ ಅಧಿಕಾರಿಗಳು, ಅಧ್ಯಾಪಕರು, ಸಿಬಂದಿ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳು ಉಪಸ್ಥಿತರಿದ್ದರು.

Udayavani, Date: 27/02/2026, p. 04